**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 6566/2024 ಸಿ.ಡಬ್ಲೂ.6 ಪಿ.ಡಬ್ಲೂ.5

| | |
|---|---|
| ಹೆಸರು | ಶಿವಕಾಂತಮ್ಮ |
| ತಂದೆ/ಗಂಡ | ಭೀಮಶಾ |
| ವಯಸ್ಸು | 65 ವರ್ಷ |
| ಉದ್ಯೋಗ | ಕೂಲಿಕೆಲಸ |
| ವಾಸಸ್ಥಳ | ಜಳ ಕಿ |

ದಿನಾಂಕ 24-12-2025

ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ಆರೋಪಿತರ ಪರಿಚಯ ಇರುತ್ತದೆ. ಚಾಸಾ 1 ರಿಂದ 4 ಮತ್ತು 7 ಪರಿಚಯ ಇರುತ್ತಾರೆ. ಚಾಸಾ 5 ನನ್ನ ಮಗಳು.

1 ವರ್ಷ 3 ತಿಂಗಳು ಹಿಂದೇ ಧೂಳಪ್ಪಾ ಅವರ ಜಮೀನಿನಲ್ಲಿ ಚಾಸಾ 4 ಮತ್ತು 5 ಅವರೊಂದಿಗೆ ಆರೋಪಿತರು ಜಗಳ ಮಾಡಿರುತ್ತಾರೆ ಆಗ ನಾನು ಮನೆಯಲ್ಲಿ ಇದ್ದೆ, ಆದ ದಿನ ನಮ್ಮ ಮನೆಯ ಮುಂದೆ ಸಿ.ಸಿ ರಸ್ತೆಯಲ್ಲಿ ಧರ್ಮಸ್ಥಳಕ್ಕೆ ಹೋಗಲು ಗಾಡಿ ಬಂದಿತ್ತು, ಚಾಸಾ 4 ಮತ್ತು 5 ರವರು ಮನೆಯ ಹೊರಗಡೆ ನಿಂತಿದ್ದರು, ನಾನು ಮನೆಯಲ್ಲಿ ನಿಂತಿದ್ದೇನು, ಆರೋಪಿತರು ಚಾಸಾ 5 ರವರ ಸೀರೆ ಹರಿದಿರುತ್ತಾರೆ ಮತ್ತು ಚಾಸಾ 4 ರವರ ಬಲ ಕಿವಿಗೆ ಹೊಡೆದು ಆರೋಪಿತರು ಚಾಸಾ 1 ರವರಿಗೂ ಸಹ ಹೊಡೆ ಬಡೆ ಮಾಡಿರುತ್ತಾರೆ. ನಾನು ಮನೆಯಿಂದ ಹೊರಗಡೆ ಬಂದು ಜಗಳ ಬಿಡಿಸಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )

<u>ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:</u>

1 ನೇ ಆರೋಪಿಯು ಮೊದಲು ಚಾಸಾ 1 ರವರಿಗೆ ಏ ರಂಡೆರ್ಯಾ ನನ್ನ ಹೆಂಡತಿ ಸಂಗಡ ಕೂಲಿ ವಿಷಯವಾಗಿ ಜಗಳ ಮಾಡುತ್ತಿ ಅಂತಾ ಅವಾಚ್ಯವಾಗಿ ಬೈದಿರುತ್ತಾನೆ ಎಂದರೆ ಸರಿ. ಆಗ ಚಾಸಾ 1 ರವರು ಈ ರೀತಿ ಬೈಯುವುದು ಸರಿ ಅಲ್ಲ ಅಂತಾ ಹೇಳಿರುತ್ತಾರೆ ಎಂದರೆ ಸರಿ. ಆಗ 1 ನೇ ಆರೋಪಿಯು ಚಾಸಾ 1 ರವರ ತಲೆಯ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ 5 ರವರಿಗೆ 1 ನೇ ಆರೋಪಿ ಸೀರೆಯ ಸೇರಗು ಹಿಡಿದು ಅವಮಾನ ಮಾಡಿ, ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. 2ನೇ ಆರೋಪಿಯು ಚಾಸಾ 4 ರವರಿಗೆ ಸೀರೆ ಹಿಡಿದು ಎಳೆದು ಅವಾಚ್ಯವಾಗಿ ಬೈದಿರುತ್ತಾರೆ

ಎಂದರೆ ಸರಿ. ಆಗ ನನ್ನ ಜೊತೆ ಚಾಸಾ 7 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಾನು ಈ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರಃ ಎಸ್ ಎಸ್ ಸಿ ವಕೀಲರಿಂದ:

1 ನೇ ಆರೋಪಿ ನನಗೆ ಅಣ್ಣನಾಗಬೇಕು. ನನಗೇ ಮತ್ತು ಚಾಸಾ 5 ರವರಿಗೆ ಆರೋಪಿತರೊಂದಿಗೆ ಯಾವುದೇ ವೈಮನಸ್ಸು ಇಲ್ಲ ಎಂದರೆ ಸರಿ. ಜಗಳ ನಡೆದಾಗ ಟಿ.ವಿ ನೋಡುತ್ತಿದ್ದೇ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಪ್ಪಳ ಕೇಳಿ ಹೊರಗೆ ಬಂದಿರುತ್ತೇನೆ ಅಂತಾ ನುಡಿಯುತ್ತಾರೆ. ಸದರಿ ಜಗಳು ನಾನು ಟಿ.ವಿ ನೋಡಿ ಹೊರಗೆ ಬರುವಷ್ಟರಲ್ಲಿ ಮುಗಿದು ಹೋಗಿತ್ತು ಎಂದರೆ ಸರಿ. ನನ್ನ ಜೊತೆ ಇಂದು ನ್ಯಾಯಾಲಯಕ್ಕೆ ಯಾರು ಬಂದಿರುವುದಿಲ್ಲ. ಚಾಸಾ 1, 4, 5 ಮತ್ತು 2 ನೇ ಆರೋಪಿಯು ಯಾವ ಊರಿನಲ್ಲಿ ಕೂಲಿ ಕೆಲಸ ಇರುತ್ತದೆಯೋ ಅಲ್ಲಿ ಎಲ್ಲರೂ ಸೇರಿಕೊಂಡು ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಚಾಸಾ 5 ರವರು ಮುಂದಾಳತ್ವ ತೆಗೆದುಕೊಂಡು ಎಲ್ಲಾ ಹೆಣ್ಣುಮಕ್ಕಳನ್ನು ಸೇರಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಚಾಸಾ 5 ರವರು ಮುಂದಾಳತ್ವ ವಹಿಸುವುದರಿಂದ ಎಲ್ಲಾ ಕೂಲಿ ಹಣವನ್ನು ಎಲ್ಲಾರಿಗೂ ಹಂಚುತ್ತಿದ್ದರು ಎಂದರೆ ಸರಿ. ಚಾಸಾ 5 ರವರು ಚಾಸಾ 1 ಮತ್ತು 4 ರವರ ಜೊತೆ ಸೇರಿಕೊಂಡು 2ನೇ ಆರೋಪಿತಳ ಕೂಲಿ ಹಣವನ್ನು ತಾವು ತೆಗೆದುಕೊಳ್ಳಬೇಕು ಅಂತಾ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಟಿ.ವಿ ನೋಡುತ್ತಿದ್ದ ಕಾರಣ ಅದರ ಶಬ್ದದಿಂದ ಯಾರು ಅವಾಚ್ಯವಾಗಿ ಬೈದಿರುತ್ತಾರೆ ಅಂತಾ ನನಗೆ ಕೇಳಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಗದ್ದಲ ಕೇಳಿಸಿತ್ತು ಅಂತಾ ನುಡಿಯುತ್ತಾರೆ. ಸದರಿ ಸಮಯದಲ್ಲಿ ಘಟನಾ ಸ್ಥಳದಲ್ಲಿ 10 ರಿಂದ 11 ಜನರು ಹಾಜರಿದ್ದರು. ಸದರಿ ಜನರ ಹೆಸರು ನನಗೆ ಹೇಳಲು ಬರುವುದಿಲ್ಲ. ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಶರಣಪ್ಪಾ ಮೇಲಿಕೇರಿ, ಜೈಭೀಮ ಮೇಲಿಕೇರಿ ಮತ್ತು ಕಲ್ಯಾಣಿ ಮೇಲಿಕೇರಿವರ ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಅವರ ಮನೆಯ ಸದಸ್ಯರು ಘಟನೆ ನಡೆದಾಗ ಹಾಜರು ಇರಲಿಲ್ಲ. 1ನೇ ಆರೋಪಿಯು ಸೀರೆ ಹಿಡಿದು ಜಗ್ಗಿದಾಗ ಚಾಸಾ 5 ರವರ ಸೀರೆ ಮತ್ತು ಬ್ಲೌಜ ಹರಿದಿತ್ತು. ಚಾಸಾ 1 ರವರಿಗೆ ಹೊಡೆದಾಗ ಕಿವಿಯಿಂದ ರಕ್ತ ಬಂದಿರಲಿಲ್ಲ ಆದರೆ ಪೆಟ್ಟು ಆಗಿತ್ತು. ಪೋಲಿಸರು ಸದರಿ ಸೀರೆ ಮತ್ತು ಬ್ಲೌಜನ್ನು ತೆಗೆದುಕೊಂಡಿರುವುದಿಲ್ಲ, ಆದರೆ ಕೇಳಿರುತ್ತಾರೆ. ಜಗಳ ಬಿಡಿಸಲು 10 ನಿಮಿಷಗಳು ಬೇಕಾಯಿತು. ಜಗಳ ಆದ ನಂತರ ನಾವು ನಮ್ಮ ಮನಗೆ ಆರೋಪಿತರು ಅವರವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. ಪೋಲಿಸರು ಜಗಳ ಆದ ಮರುದಿನ ಬಂದು ನನಗೆ ಜಗಳದ ಬಗ್ಗೆ ಕೇಳಿರುತ್ತಾರೆ. ನಾನು ಹೇಳಿದ್ದನು ಪೋಲಿಸರು ಕೈಯಿಂದ ಬರೆದುಕೊಂಡಿರುತ್ತಾರೆ. ನನ್ನ ಜೊತೆ ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ಪೋಲಿಸರು ಅವರು ಬರೆದುಕೊಂಡಿದ್ದನು ನನಗೆ ಓದಿ ಹೇಳಿರುವುದಿಲ್ಲ. ಚಾಸಾ 1, 4 ಮತ್ತು 5 ರವರು ಸೇರಿಕೊಂಡು 2ನೇ ಆರೋಪಿಯ ಕೂಲೀ ಹಣ ಕೊಡಬಾರದು ಎಂಬ ಉದ್ದೇಶಕ್ಕೆ ಸದರಿ ಪ್ರಕರಣವನ್ನು ದಾಖಲಿಸಿದ್ದು ನಾನು, ಚಾಸಾ 5 ನನ್ನ ಮಗಳಾದ ಕಾರಣ ಅವಳಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಜಗಳ ನಡೆದಿಲ್ಲ ಎಂದರೆ ಸರಿಯಲ್ಲ.

1 ವರ್ಷ 3 ತಿಂಗಳು ಹಿಂದೇ ಧೂಳಪ್ಪಾ ಅವರ ಜಮೀನಿನಲ್ಲಿ ಚಾಸಾ 4 ಮತ್ತು 5 ಅವರೊಂದಿಗೆ ಆರೋಪಿತರು ಜಗಳ ಮಾಡಿರುತ್ತಾರೆ ಆಗ ನಾನು ಮನೆಯಲ್ಲಿ ಇದ್ದೆ, ಆದ ದಿನ ನಮ್ಮ ಮನೆಯ ಮುಂದೆ ಸಿ.ಸಿ ರಸ್ತೆಯಲ್ಲಿ ಧರ್ಮಸ್ಥಳಕ್ಕೆ ಹೋಗಲು ಗಾಡಿ ಬಂದಿತ್ತು, ಚಾಸಾ 4 ಮತ್ತು 5 ರವರು ಮನೆಯ ಹೊರಗಡೆ ನಿಂತಿದ್ದರು, ನಾನು ಮನೆಯಲ್ಲಿ ನಿಂತಿದ್ದೇನು, ಆರೋಪಿತರು ಚಾಸಾ 5 ರವರ ಸೀರೆ ಹರಿದಿರುತ್ತಾರೆ ಮತ್ತು ಚಾಸಾ 4 ರವರ ಬಲ ಕಿವಿಗೆ ಹೊಡೆದು ಆರೋಪಿತರು ಚಾಸಾ 1 ರವರಿಗೂ ಸಹ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಯಿಂದ ಹೊರಗಡೆ ಬಂದು ಜಗಳ ಬಿಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿಯು ಮೊದಲು ಚಾಸಾ 1 ರವರಿಗೆ ಏ ರಂಡೆರ್ಯಾ ನನ್ನ ಹೆಂಡತಿ ಸಂಗಡ ಕೂಲಿ ವಿಷಯವಾಗಿ ಜಗಳ ಮಾಡುತ್ತಿ ಅಂತಾ ಅವಾಚ್ಯವಾಗಿ ಬೈದಿರುತ್ತಾನೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಈ ರೀತಿ ಬೈಯುವುದು ಸರಿ ಅಲ್ಲ ಅಂತಾ ಹೇಳಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ಚಾಸಾ 1 ರವರ ತಲೆಯ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 5 ರವರಿಗೆ 1 ನೇ ಆರೋಪಿ ಸೀರೆಯ ಸೇರಗು ಹಿಡಿದು ಅವಮಾನ ಮಾಡಿ, ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಆರೋಪಿಯು ಚಾಸಾ 4 ರವರಿಗೆ ಸೀರೆ ಹಿಡಿದು ಎಳೆದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನನ್ನ ಜೊತೆ ಚಾಸಾ 7 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ